# ಧಾರವಾಡ ಪೊಲೀಸ್ ಮಕ್ಕಳ ವಸತಿ ಶಾಲೆ ಅಭಿವೃದ್ಧಿಗೆ

# ಸಂಪೂರ್ಣ ಸಹಕಾರ: ಡಾ. ಪರಂ



**ಬೆಂಗಳೂರು:** ಧಾರವಾಡದ ಶ್ರೀ ಎಸ್.ಎ .ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆ ಬಲವರ್ಧನೆಗೆ ಸಂಪೂರ್ಣ ಸಹಕರಿಸುವುದಾಗಿ ಗೃಹ ಸಚಿವ ಡಾ. ಜಿ .ಪರಮೇಶ್ವರ್ ಭರವಸೆ ನೀಡಿದರು.

ಅವರು ಬೆಂಗಳೂರಿನ ವಿಧಾನಪರಿಷತ್ತಿನ ಸಭಾಭವನದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, ಧಾರವಾಡದ ಪೊಲೀಸ್ ಮಕ್ಕಳ ವಸತಿ ಶಾಲೆ ಸಾವಿರಾರು ವಿದ್ಯಾರ್ಥಿಗಳಿಗೆ ದಶಕಗಳಿಂದ ಜ್ಞಾನಾರ್ಜನೆಯನ್ನು ಕಲ್ಪಿಸಿದೆ. ರಾಜ್ಯದಲ್ಲಿಯೇ ಪೊಲೀಸ್ ಮಕ್ಕಳಿಗಾಗಿ ಇರುವ ಈ ಏಕೈಕ ಶಾಲೆಯನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮದಾಗಿದೆ. ಕೆಲ ವರ್ಷಗಳಿಂದ ಬೇರೆ ಬೇರೆ ಕಾರಣಗಳಿಂದಾಗಿ ಶಾಲೆಯ ಆಡಳಿತದಲ್ಲಿ ಅಭಿವೃದ್ಧಿಯಲ್ಲಿ ಕುಂಠಿತವಾದ ಸಂಗತಿ ನನ್ನ ಗಮನಕ್ಕೆ ಇದೆ. ಈ ಶಾಲೆಯ ಕುರಿತು ಸಭಾಪತಿ ಬಸವರಾಜ್ ಹೊರಟ್ಟಿ ಅವರು ಸಾಕಷ್ಟು ಪ್ರಯತ್ನ ಮಾಡಿ...

➩ ಪುಟ 3

# ಸಂಪೂರ್ಣ ಸಹಕಾರ: ಡಾ. ಪರಂ

ಆಯಾ ಕಾಲದ ಸರಕಾರದ ಗಮನ ಸೆಳೆದು ಶಾಲೆಯನ್ನ ಉಳಿಸಿಕೊಂಡು ಹೋಗುವಲ್ಲಿ ಇವರ ಪ್ರಯತ್ನ ದೊಡ್ಡದು. ಹೊರಟ್ಟಿ ಅವರ ಕನಸಿನ ಕೂಸಾದ ಈ ಶಾಲೆಯನ್ನು ಪುನರ್ ನಿರ್ಮಿಸಿ ಎಲ್ಲ ರೀತಿಯ ಸಹಕಾರದೊಂದಿಗೆ ಒಂದು ಪ್ರತಿಷ್ಠಿತ ಶಾಲೆಯನ್ನಾಗಿ ಕಟ್ಟುವಲ್ಲಿ ನಾನು ಪ್ರಾಮಾಣಿಕ ಪ್ರಯತ್ನವನ್ನ ಮಾಡುತ್ತೇನೆ. ಈ ಶಾಲೆಯ ಕುರಿತ ಹೊರಟ್ಟಿ ಅವರ ಕಳಕಳಿ ಮತ್ತು ಕಾಳಜಿಗೆ ನನ್ನ ಸಂಪೂರ್ಣ ಬೆಂಬಲ ಇದೆ ಎಂದು ಹೇಳಿದರು.

ಸಭೆಯ ನೇತೃತ್ವ ವಹಿಸಿದ ಸಭಾಪತಿ ಬಸವರಾಜ್ ಹೊರಟ್ಟಿಯವರು ಮಾತನಾಡಿ ದೇಶದಲ್ಲಿಯೇ ಮೊದಲ ಮಾದರಿಯಾದ ಈ ಶಾಲೆಯನ್ನ ಉಳಿಸಿಕೊಂಡು ಹೋಗುವ ಮೂಲಕ ಪೊಲೀಸರಿಗೆ ಒಂದು ನೈತಿಕ ಬೆಂಬಲವನ್ನ ಕೊಡಬೇಕಾಗಿದೆ ಅವರ ಮಕ್ಕಳಿಗೆ ಉತ್ಕೃಷ್ಟ ಮಟ್ಟದ ಶಿಕ್ಷಣ ಸಿಗುವಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದು ಇದೆ ಎಂದರು.

**ಧಾರವಾಡದ ಪೊಲೀಸ್ ಮಕ್ಕಳ ವಸತಿ ಶಾಲೆಯ ಅಭಿವೃದ್ಧಿಗೆ ಸಹಕಾರ: ಡಾ. ಜಿ.ಪರಮೇಶ್ವರ್**

# ನೈತಿಕ ಬೆಂಬಲದ ಜವಾಬ್ದಾರಿ ನಮ್ಮದು

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಧಾರವಾಡದ ಎಸ್.ಎ. ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆ ಬಲವರ್ಧನೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಭರವಸೆ ನೀಡಿದರು.



ಅವರು ಬೆಂಗಳೂರಿನ ವಿಧಾನಪರಿಷತ್ ಸಭಾಭವನದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, ಧಾರವಾಡದ ಪೊಲೀಸ್ ಮಕ್ಕಳ ವಸತಿ ಶಾಲೆ ಸಾವಿರಾರು ವಿದ್ಯಾರ್ಥಿಗಳಿಗೆ ದಶಕಗಳಿಂದ ಜ್ಞಾನಾರ್ಜನೆಯನ್ನು ಕಲ್ಪಿಸಿದೆ. ರಾಜ್ಯದಲ್ಲಿಯೇ ಪೊಲೀಸ್ ಮಕ್ಕಳಿಗಾಗಿ ಇರುವ ಈ ಏಕೈಕ ಶಾಲೆಯನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮದಾಗಿದೆ. ಕೆಲ ವರ್ಷಗಳಿಂದ ಬೇರೆ ಬೇರೆ ಕಾರಣಗಳಿಂದಾಗಿ ಶಾಲೆಯ ಅಭಿವೃದ್ಧಿಯಲ್ಲಿ ಕುಂಠಿತವಾದ ಸಂಗತಿ ನನ್ನ ಗಮನಕ್ಕಿದೆ. ಈ ಶಾಲೆಯ ಕುರಿತು ಸಭಾಪತಿ ಬಸವರಾಜ್ ಹೊರಟ್ಟಿ ಅವರು ಸಾಕಷ್ಟು ಪ್ರಯತ್ನ ಮಾಡಿ ಆಯಾ ಸರಕಾರದ ಗಮನ ಸೆಳೆದು ಶಾಲೆಯನ್ನ ಉಳಿಸಿಕೊಂಡು ಹೋಗುವಲ್ಲಿ ಶ್ರಮಿಸಿದ್ದಾರೆ. ಈ ಶಾಲೆಯ ಕುರಿತ ಹೊರಟ್ಟಿ ಅವರ ಕಳಕಳಿ ಮತ್ತು ಕಾಳಜಿಗೆ ನನ್ನ ಸಂಪೂರ್ಣ ಬೆಂಬಲ ಇದೆ ಎಂದರು.

ಈ ಸಂದರ್ಭದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಒಳಾಡಳಿತ ಇಲಾಖೆ, ಮಹಾ ನಿರ್ದೇಶಕರು ಮತ್ತು ಆರಕ್ಷಕರ ಮಹಾನಿರೀಕ್ಷಕರು, ಪೊಲೀಸ್ ಅಧೀಕ್ಷಕರು ಧಾರವಾಡ, ವಿಶೇಷ ಕಾರ್ಯದರ್ಶಿಗಳು ಒಳ ಆಡಳಿತ (ಪೊಲೀಸ್ ಸೇವೆ) ಇಲಾಖೆಯ ಡಾ. ಮಂಗಳ ಜಿ.ಎಸ್., ಎ.ಡಿ.ಜಿ.ಪಿ ಸುಮಂಗಲ, ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿ ಡಾ. ಮಹೇಶ್ ವಾಲ್ವೇಕರ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬಸವರಾಜ್ ಹೊರಟ್ಟಿ ಮಾತನಾಡಿ, ದೇಶದಲ್ಲಿಯೇ ಮೊದಲ ಮಾದರಿಯಾದ ಈ ಶಾಲೆಯನ್ನು ಉಳಿಸಿಕೊಂಡು ಹೋಗುವ ಮೂಲಕ ಪೊಲೀಸರಿಗೆ ನೈತಿಕ ಬೆಂಬಲ ಕೊಡಬೇಕಾಗಿದೆ. ಅವರ ಮಕ್ಕಳಿಗೆ ಉತ್ಕೃಷ್ಟ ಮಟ್ಟದ ಶಿಕ್ಷಣ ಸಿಗುವಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದಾಗಿದೆ. ಗೃಹ ಸಚಿವರಾದ ಡಾ. ಜಿ. ಪರಮೇಶ್ವರ್ ಅವರ ಮೇಲೆ ನನಗೆ ಸಂಪೂರ್ಣ ವಿಶ್ವಾಸವಿದೆ ಎಂದರು.

ಹೊಸ ದಿಗಂತ

# ಪೊಲೀಸ್ ಮಕ್ಕಳ ವಸತಿ ಶಾಲೆ ಬಲವರ್ಧನೆಗೆ ಸಹಕಾರ

**ಹುಬ್ಬಳ್ಳಿ:** ಧಾರವಾಡದ ಎಸ್.ಎ.ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆ ಬಲವರ್ಧನೆಗೆ ಸಂಪೂರ್ಣ ಸಹಕರಿಸುವುದಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಭರವಸೆ ನೀಡಿದರು.

ಬೆಂಗಳೂರಿನ ವಿಧಾನಪರಿಷತ್‌ನ ಸಭಾಭವನದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಧಾರವಾಡದ ಪೊಲೀಸ್ ಮಕ್ಕಳ ವಸತಿ ಶಾಲೆ ಸಾವಿರಾರು ವಿದ್ಯಾರ್ಥಿಗಳಿಗೆ ದಶಕಗಳಿಂದ ಜ್ಞಾನಾರ್ಜನೆಯನ್ನು ಕಲ್ಪಿಸಿದೆ. ರಾಜ್ಯದಲ್ಲಿಯೇ ಪೊಲೀಸ್ ಮಕ್ಕಳಿಗಾಗಿ ಇರುವ ಈ ಏಕೈಕ ಶಾಲೆಯನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮದಾಗಿದೆ ಎಂದರು.



ಕೆಲ ವರ್ಷಗಳಿಂದ ಬೇರೆ ಬೇರೆ ಕಾರಣಗಳಿಂದಾಗಿ ಶಾಲೆಯ ಆಡಳಿತದಲ್ಲಿ ಅಭಿವೃದ್ಧಿಯಲ್ಲಿ ಕುಂಠಿತವಾದ ಸಂಗತಿ ನನ್ನ ಗಮನಕ್ಕೆ ಇದೆ. ಈ ಶಾಲೆಯ ಕುರಿತು ಸಭಾಪತಿ ಬಸವರಾಜ ಹೊರಟ್ಟಿ ಅವರು ಸಾಕಷ್ಟು ಪ್ರಯತ್ನ ಮಾಡಿ ಆಯಾ ಕಾಲದ ಸರ್ಕಾರದ ಗಮನ ಸೆಳೆದು ಶಾಲೆಯನ್ನ ಉಳಿಸಿಕೊಂಡು ಹೋಗುವಲ್ಲಿ ಇವರ ಪ್ರಯತ್ನ ದೊಡ್ಡದು ಎಂದು ತಿಳಿಸಿದರು.

ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ದೇಶದಲ್ಲಿಯೇ ಮೊದಲ ಮಾದರಿಯಾದ ಈ ಶಾಲೆಯನ್ನ ಉಳಿಸಿಕೊಂಡು ಹೋಗುವ ಮೂಲಕ ಪೊಲೀಸರಿಗೆ ಒಂದು ನೈತಿಕ ಬೆಂಬಲವನ್ನ ಕೊಡಬೇಕಾಗಿದೆ.

ತಾವು ಈ ಶಾಲೆಯನ್ನು ಉಳಿಸಿಕೊಂಡು ಹೋಗುವಲ್ಲಿ ಬೆಳೆಸಿಕೊಂಡು ಹೋಗುವಲ್ಲಿ ತಮ್ಮದೇ ಆದ ವಿಶೇಷ ಕೊಡುಗೆಯನ್ನ ನೀಡುತ್ತಿರೆಂಬ ಭರವಸೆ ನನಗೆ ಇದೆ. ಗೃಹ ಸಚಿವ ಶಿಕ್ಷಣ ಪ್ರೇಮಿ ಡಾ.ಜಿ .ಪರಮೇಶ್ವರ್ ಅವರ ಮೇಲೆ ನನಗೆ ಸಂಪೂರ್ಣ ವಿಶ್ವಾಸ ಇದೆ ಎಂದು ಹೇಳಿದರು.

ಗೃಹ ಇಲಾಖೆಗೆ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

# ಧಾರವಾಡದ ಪೊಲೀಸ್ ಮಕ್ಕಳ ವಸತಿ ಶಾಲೆಯ ಅಭಿವೃದ್ಧಿಗೆ ಸಂಪೂರ್ಣ ಸಹಕಾರ.

**ಗದಗ ಸಂಜೆ ವಾರ್ತೆ :**

ಧಾರವಾಡದ ಎಸ್.ಎ .ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆ ಬಲವರ್ಧನೆಗೆ ಸಂಪೂರ್ಣ ಸಹಕರಿಸುವುದಾಗಿ ಗೃಹ ಸಚಿವರಾದ ಡಾ. ಜಿ .ಪರಮೇಶ್ವರ್ ಭರವಸೆ ನೀಡಿದರು.



ಅವರು ಬೆಂಗಳೂರಿನ ವಿಧಾನಪರಿಷತ್ತಿನ ಸಭಾಭವನದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು ಧಾರವಾಡದ ಪೊಲೀಸ್ ಮಕ್ಕಳ ವಸತಿ ಶಾಲೆ ಸಾವಿರಾರು ವಿದ್ಯಾರ್ಥಿಗಳಿಗೆ ದಶಕಗಳಿಂದ ಜ್ಞಾನಾರ್ಜನೆಯನ್ನು ಕಲ್ಪಿಸಿದೆ. ರಾಜ್ಯದಲ್ಲಿಯೇ ಪೊಲೀಸ್ ಮಕ್ಕಳಿಗಾಗಿ ಇರುವ ಈ ಏಕೈಕ ಶಾಲೆಯನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮದಾಗಿದೆ. ಕೆಲ ವರ್ಷಗಳಿಂದ ಬೇರೆ ಬೇರೆ ಕಾರಣಗಳಿಂದಾಗಿ ಶಾಲೆಯ ಆಡಳಿತದಲ್ಲಿ ಅಭಿವೃದ್ಧಿಯಲ್ಲಿ ಕುಂಠಿತವಾದ ಸಂಗತಿ ನನ್ನ ಗಮನಕ್ಕೆ ಇದೆ. ಈ ಶಾಲೆಯ ಕುರಿತು ಸಭಾಪತಿ ಬಸವರಾಜ್ ಹೊರಟ್ಟಿ ಅವರು ಸಾಕಷ್ಟು ಪ್ರಯತ್ನ ಮಾಡಿ ಆಯಾ ಕಾಲದ ಸರಕಾರದ ಗಮನ ಸೆಳೆದು ಶಾಲೆಯನ್ನ ಉಳಿಸಿಕೊಂಡು ಹೋಗುವಲ್ಲಿ ಇವರ ಪ್ರಯತ್ನ ದೊಡ್ಡದು. ಹೊರಟ್ಟಿ ಅವರ ಕನಸಿನ ಕೂಸಾದ ಈ ಶಾಲೆಯನ್ನು ಪುನರ್ ನಿರ್ಮಿಸಿ ಎಲ್ಲ ರೀತಿಯ ಸಹಕಾರದೊಂದಿಗೆ ಒಂದು ಪ್ರತಿಷ್ಠಿತ ಶಾಲೆಯನ್ನಾಗಿ ಕಟ್ಟುವಲ್ಲಿ ನಾನು ಪ್ರಾಮಾಣಿಕ ಪ್ರಯತ್ನವನ್ನ ಮಾಡುತ್ತೇನೆ. ಈ ಶಾಲೆಯ ಕುರಿತ ಹೊರಟ್ಟಿ ಅವರ ಕಳಕಳಿ ಮತ್ತು ಕಾಳಜಿಗೆ ನನ್ನ ಸಂಪೂರ್ಣ ಬೆಂಬಲ ಇದೆ ಎಂದು ಹೇಳಿದರು.

ಸಭೆಯ ನೇತೃತ್ವ ವಹಿಸಿದ ಸಭಾಪತಿ ಬಸವರಾಜ್ ಹೊರಟ್ಟಿಯವರು ಮಾತನಾಡಿ ದೇಶದಲ್ಲಿಯೇ ಮೊದಲ ಮಾದರಿಯಾದ ಈ ಶಾಲೆಯನ್ನ ಉಳಿಸಿಕೊಂಡು ಹೋಗುವ ಮೂಲಕ ಪೊಲೀಸರಿಗೆ ಒಂದು ನೈತಿಕ ಬೆಂಬಲವನ್ನ ಕೊಡಬೇಕಾಗಿದೆ ಅವರ ಮಕ್ಕಳಿಗೆ ಉತ್ಕೃಷ್ಟ ಮಟ್ಟದ ಶಿಕ್ಷಣ ಸಿಗುವಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದು ಇದೆ. ಈ ಶಾಲೆಯನ್ನು ಉಳಿಸಿಕೊಂಡು ಹೋಗಲು ನಾನು ಸಾಕಷ್ಟು ಪ್ರಯತ್ನ ಮಾಡಿದ್ದನ್ನು ಸಭೆಯ ಗಮನಕ್ಕೆ ತಂದಿದ್ದೇನೆ ತಾವು ಪ್ರಾಮಾಣಿಕ ಪ್ರಯತ್ನದ ಮೂಲಕ ಈ ಶಾಲೆಯನ್ನ ಪುನರ್ ನಿರ್ಮಿಸಿ ಮೊದಲಿನಂತೆ ಈ ಶಾಲೆ ನೂರಾರು ಮಕ್ಕಳ ಕಲಿಕೆಗೆ ಆಸರೆಯಾಗಲಿ ಎಂದು ಹೇಳಿದರು. ತಾವು ಈ ಶಾಲೆಯನ್ನು ಉಳಿಸಿಕೊಂಡು ಹೋಗುವಲ್ಲಿ ಬೆಳೆಸಿಕೊಂಡು ಹೋಗುವಲ್ಲಿ ತಮ್ಮದೇ ಆದ ವಿಶೇಷ ಕೊಡುಗೆಯನ್ನ ನೀಡುತ್ತಿರೆಂಬ ಭರವಸೆ ನನಗೆ ಇದೆ. ಗೃಹ ಸಚಿವರಾದ ಶಿಕ್ಷಣ ಪ್ರೇಮಿ ಡಾ. ಜಿ .ಪರಮೇಶ್ವರ್ ಅವರ ಮೇಲೆ ನನಗೆ ಸಂಪೂರ್ಣ ವಿಶ್ವಾಸ ಇದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಒಳಾಡಳಿತ ಇಲಾಖೆ, ಮಹಾ ನಿರ್ದೇಶಕರು ಮತ್ತು ಆರಕ್ಷಕರ ಮಹಾನಿರೀಕ್ಷಕರು, ಇನ್ಸ್ಪೆಕ್ಟರ್ ಜನರಲ್ ಪೊಲೀಸ್ ಉತ್ತರ ವಲಯ ಬೆಂಗಳೂರು, ಪೊಲೀಸ್ ಅಧೀಕ್ಷಕರು ಧಾರವಾಡ, ಡಾ ಮಂಗಳ ಜಿ.ಎಸ್. ವಿಶೇಷ ಕಾರ್ಯದರ್ಶಿಗಳು ಒಳ ಆಡಳಿತ (ಪೊಲೀಸ್ ಸೇವೆ) ಇಲಾಖೆ, ಎ.ಡಿ.ಜಿ.ಪಿ ಶ್ರೀಮತಿ ಸುಮಂಗಲ, ಸಭಾಪತಿಯವರ ವಿಶೇಷ ಕರ್ತವ್ಯ ಅಧಿಕಾರಿ ಡಾ. ಮಹೇಶ್ ವಾಲ್ವೆಕರ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.